# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 372 |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಬಸವನಗೌಡ ಪಾಟೀಲ್ |
| ಉತ್ತರಿಸಬೇಕಾದ ದಿನಾಂಕ | : | 06.03.2020 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಗೊಂಡ ಮಹಿಳಾ ಮೇಲ್ವಿಚಾರಕಿಯರ ಸ್ಥಳ ನಿಯುಕ್ತಿಯಲ್ಲಿ ಗೊಂದಲಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರಿಪಡಿಸಲು ಕೈಗೊಂಡ ಕ್ರಮಗಳೇನು; | ಇಲ್ಲ<br>2019ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ 628 ಅಭ್ಯರ್ಥಿಗಳು ಮೇಲ್ವಿಚಾರಕಿ ಹುದ್ದೆಗೆ ಆಯ್ಕೆಗೊಂಡಿದ್ದು, ಈ ಪೈಕಿ 519 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿತ್ತು. ಈ ರೀತಿ ನೇಮಕಗೊಂಡ ಅಭ್ಯರ್ಥಿಗಳಿಗೆ ದಿನಾಂಕ:24.01.2020 ರಂದು ಸ್ಥಳ ನಿಯುಕ್ತಿ ಆದೇಶ ಹೊರಡಿಸಲಾಗಿತ್ತು. |
| ಆ) | ಮೇಲ್ವಿಚಾರಕಿಯರ ಸ್ಥಳ ನಿಯುಕ್ತಿಯು ನಿಯಮಗಳ ಪ್ರಕಾರ ಆಗಿದೆಯೇ? ಯಾವ ರೀತಿಯಲ್ಲಿ ಸ್ಥಳ ನಿಯುಕ್ತಿಯನ್ನು ಮಾಡಲಾಗಿದೆ; | ಸದರಿ ಸ್ಥಳ ನಿಯುಕ್ತಿ ಆದೇಶದಲ್ಲಿ Non-HKP ಮತ್ತು HKP ಅಭ್ಯರ್ಥಿಗಳಿಗೆ 371(ಜೆ)ರಡಿ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಜಿಲ್ಲೆಗಳ ಅಭ್ಯರ್ಥಿಗಳಿಗೆ ಸ್ಥಳ ಹಂಚಿಕೆಗೊಳಿಸುವಲ್ಲಿ ವ್ಯತ್ಯಾಸವಾಗಿರುತ್ತದೆ. ಈ ರೀತಿ ಉಂಟಾಗಿರುವ ಗೊಂದಲದ ಬಗ್ಗೆ ಸರಿಪಡಿಸಲು ಮಾನ್ಯ ಮುಖ್ಯಮಂತ್ರಿಯವರ ನಿರ್ದೇಶನದಂತೆ ಈಗಾಗಲೇ ಸ್ಥಳ ನಿಯುಕ್ತಿಗೊಂಡಿರುವ ಅಭ್ಯರ್ಥಿಗಳು ಸ್ಥಳ ನಿಯುಕ್ತಿಗೊಂಡ ಸ್ಥಳದಲ್ಲಿಯೇ ಮುಂದುವರೆಯಲು ಇಚ್ಛಿಸಿದಲ್ಲಿ ಅಂತಹವರನ್ನು ಹೊರತುಪಡಿಸಿ, ಉಳಿದ ಅಭ್ಯರ್ಥಿಗಳಿಗೆ ದಿನಾಂಕ:12.02.2020ರಂದು ಸಮಾಲೋಚನೆ ಮುಖಾಂತರ (ಕೌನ್ಸಿಲಿಂಗ್) ಸ್ಥಳನಿಯುಕ್ತಿಗೊಳಿಸಿ ದಿನಾಂಕ:13.02.2020ರಂದು ಆದೇಶ ಹೊರಡಿಸಲಾಗಿದೆ. |

| | | |
|---|---|---|
| ಇ) | ಮೇಲ್ವಿಚಾರಕಿಯರ ಸ್ಥಳ ನಿಯುಕ್ತಿಯನ್ನು ಕೌನ್ಸಿಲಿಂಗ್ ಮೂಲಕ ಮಾಡಲಾಗಿದೆಯೇ; ಕೌನ್ಸಿಲಿಂಗ್ ಮೂಲಕ ಮಾಡಲಾಗಿದ್ದರೆ ಎಲ್ಲಾ ಅಭ್ಯರ್ಥಿಗಳಿಗೂ ಏಕ ಕಾಲದಲ್ಲಿ ಕೌನ್ಸಿಲಿಂಗ್ ಏಕೆ ಮಾಡಲಿಲ್ಲ, ಮತ್ತು ಕೌನ್ಸಿಲಿಂಗ್‌ಗೆ ಹಾಜರಾಗಲು ಎಲ್ಲಾ ಅಭ್ಯರ್ಥಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿತ್ತೇ; ನೀಡಲಾಗಿದ್ದರೆ, ಎಷ್ಟು ದಿನಗಳ ಕಾಲಾವಕಾಶ ನೀಡಲಾಗಿತ್ತು; | ಹೌದು<br>ಹೊಸದಾಗಿ ಮೇಲ್ವಿಚಾರಕಿಯರ ನೇಮಕಗೊಂಡ 519 ಅಭ್ಯರ್ಥಿಗಳ ಪೈಕಿ ಕೆಲವು ಅಭ್ಯರ್ಥಿಗಳು ದಿನಾಂಕ:24.01.2020ರ ಸ್ಥಳ ನಿಯುಕ್ತಿ ಆದೇಶದಂತೆ ಅದೇ ಸ್ಥಳದಲ್ಲಿ ಮುಂದುವರೆಯಲು ಇಚ್ಛೆಯುಳ್ಳವರನ್ನು ಹೊರತುಪಡಿಸಿ, ಉಳಿದ ಅಭ್ಯರ್ಥಿಗಳಿಗೆ ಏಕಕಾಲದಲ್ಲಿ ದಿನಾಂಕ:12.02.2020ರಂದು ಕೌನ್ಸಿಲಿಂಗ್ ಮುಖಾಂತರ ದಿನಾಂಕ:13.02.2020ರಂದು ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿದೆ.<br>ಕೌನ್ಸಿಲಿಂಗ್‌ನಲ್ಲಿ ಹಾಜರಾಗಲು ಎಲ್ಲಾ ಅಭ್ಯರ್ಥಿಗಳಿಗೆ ದಿನಾಂಕ:10.02.2020ರಂದು ಉಪ ನಿರ್ದೇಶಕರುಗಳ ಮೂಲಕ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಇ-ಮೇಲ್ ಮೂಲಕ ಮತ್ತು ವಾಟ್ಸ್‌ಪ್ ಹಾಗೂ ದೂರವಾಣಿ ಮೂಲಕ ತಿಳಿಸಲಾಗಿದೆ. |
| ಈ) | ಕೌನ್ಸಿಲಿಂಗ್ ಮಾಡುವ ಪೂರ್ವದಲ್ಲಿ ಖಾಲಿ ಹುದ್ದೆಗಳ ಪಟ್ಟಿಯನ್ನು ಅಭ್ಯರ್ಥಿಗಳ ಗಮನಕ್ಕೆ ತರಲಾಗಿತ್ತೇ; | ಹೌದು,<br>ಖಾಲಿ ಹುದ್ದೆಗಳ ಮಾಹಿತಿಯನ್ನು ಕೌನ್ಸಿಲಿಂಗ್ ಸ್ಥಳದ ಹೊರಗಡೆ ಪ್ರಕಟಿಸಲಾಗಿತ್ತು. ಅಭ್ಯರ್ಥಿಗಳಿಗೆ ಪ್ರೊಜೆಕ್ಟರ್ ಮೂಲಕ ದೊಡ್ಡ ಪರದೆಯಲ್ಲಿ ದಿನಾಂಕ:12.02.2020ರಂದೇ ಪ್ರದರ್ಶಿಸಲಾಯಿತು. ಮೇಲ್ವಿಚಾರಕಿಯರು ಆಯ್ಕೆ ಮಾಡಿದ ಸ್ಥಳಕ್ಕೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. |
| ಉ) | ಕೌನ್ಸಿಲಿಂಗ್‌ಗೆ ಹಾಜರಾಗಲು ಸೂಕ್ತ ಸಮಯಾವಕಾಶವನ್ನು ನೀಡದಿರುವುದಕ್ಕೆ ಕಾರಣಗಳೇನು; | ಸೂಕ್ತ ಸಮಯಾವಕಾಶ ನೀಡಲಾಗಿದೆ |
| ಊ) | ಆಗಿರುವ ಗೊಂದಲವನ್ನು ಮತ್ತು ಕೆಲವೊಂದು ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಮತ್ತೊಮ್ಮೆ ಎಲ್ಲಾ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; | ಮಾನ್ಯ ಮುಖ್ಯಮಂತ್ರಿಗಳ ಆದೇಶದಂತೆ ಬದಲಾವಣೆ ಕೋರಿದವರಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಿರುವುದರಿಂದ ಮತ್ತೊಮ್ಮೆ ಕೌನ್ಸಿಲಿಂಗ್ ಮಾಡುವ ಅಗತ್ಯವಿರುವುದಿಲ್ಲ. |

ಸಂಖ್ಯೆ: ಮಮಇ 67 ಎಸ್‌ಜೆಡಿ 2020

(ಶಶಿಕಲಾ ಅ.ಜೊಲ್ಲೆ)
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.